ರೋಗ ನಿರೋಧಕ ಲಸಿಕೆಗಳ ಕೊರತೆಯ ಬಗ್ಗೆ

ಟಿಸಿಕೆ. ಶ್ರೀ ಎಸ್. ಎನ್. ಕಡಪಟ್ಟಿ (ಹುನಗುಂದ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ದ್ರಾಕ್ಷಿ ಹಾಗೂ ಇತರ ಬೆಳೆಗಳಿಗೆ ಅವಶ್ಯವಾಗಿ ಬೇಕಾಗುವ ರೋಗ ನಿವಾರಕ ರಿಡೋಮಿಲ್ ಹಾಗೂ ಜಿಬ್ರಾಲಿಕ್ ಆಸಿಡ್‌ಗಳ ಅಂದಾಜು ಪ್ರಮಾಣ ಎಷ್ಟು ?

ಆ) ರಿಡೋಮಿಲ್ ಬಹಿರಂಗ ಮಾರುಕಟ್ಟೆಯಲ್ಲಿ ಸಿಗದೆ ಕಾಳಸಂತೆಯಲ್ಲಿ ಅತ್ಯಂತ ದುಬಾರಿಯಾಗಿ ಹಾಗೂ ತೊಂದರೆಯಿಂದಾಗುತ್ತಿದ್ದ ಜಿಬ್ರಾಲಿಕ್ ಆಸಿಡ್ ಕೊರತೆಯಿಂದ ಸಿಗಂತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ವಿನಂತಿಸಿ ರಾಜ್ಯಕ್ಕೆ ಬೇಕಾಗುವಷ್ಟು ಆಮದು ಮಾಡಿಕೊಳ್ಳುವ ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ವೈ. ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ದ್ರಾಕ್ಷಿ ಮತ್ತು ಮೆಣಸು ಬೆಳೆಗಳಿಗೆ ಬೇಕಾಗಿರುವ ರಿಡೋಮಿಲ್ ವಾರ್ಷಿಕ ಅಂದಾಜು ಅಗತ್ಯ ೧೫ ಟನ್ನುಗಳು.

ದ್ರಾಕ್ಷಿಗೆ ಬೇಕಾಗಿರುವ ಜಿಬ್ರಾಲಿಕ್ ಆಸಿಡ್ ವಾರ್ಷಿಕ ಅಂದಾಜು ಅಗತ್ಯ ೧೮ ಕೆ.ಜಿ.ಗಳು

ಆ) ರಿಡೋಮಿಲ್ ಆಮದು ಮಾಡಿಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರ ಅಧಿಕೃತವಾಗಿ ಆಮದು ಮಾಡಿಕೊಳ್ಳಲು ಅನುಮತಿ ಇಲ್ಲ.

ಜಿಬ್ರಾಲಿಕ್ ಆಸಿಡ್ ಮುಕ್ತ ಮಾರುಕಟ್ಟೆಯಲ್ಲಿ ಹಾಗೂ ಕೆಲವು ಸಹಕಾರಿ ಸಂಘಗಳಲ್ಲಿ ತೊಂದರೆಯಿಲ್ಲದೆ ದೊರಕುತ್ತಿದೆ.

ಇ) ಹೌದು. ರಿಡೋಮಿಲ್ ಅಗತ್ಯ ಕಂಡು ರೈತರ ಉಪಯೋಗಕ್ಕಾಗಿ ಈ ಔಷಧವನ್ನು ಆಮದು ಮಾಡಿಕೊಂಡು ರೈತರಿಗೆ ಒದಗಿಸಲು ಕೇಂದ್ರ ಸರ್ಕಾರವನ್ನು ವಿನಂತಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರವು ರಿಡೋಮಿಲ್ ಔಷಧವು ಕ್ಷೇಮಕರವಲ್ಲವೆಂದೂ, ಈ ಔಷಧದ ಆಮದಿದೆ ಮಂತ್ತು ಉಪಯೋಗಕ್ಕೆ ಪರವಾನಿಗೆ ಕೊಟ್ಟಿಲ್ಲ. ಆದರೆ ಈ ರೋಗವನ್ನು ತಡೆಗಟ್ಟಲು ಈಗಾಗಲೇ ಷರತ್ತಿನ ಮೇಲೆ ಪರವಾನಿಗೆ ಕೊಟ್ಟಿರುವ "ಕಾರತನ" "ಬ್ರೈಡಿಮಾರ್ಫ್" ಮಂತ್ತು "ಬೆನಾಮಿಲ್" ಔಷಧಿಗಳನ್ನು ಉಪಯೋಗಿಸಲು ಸೂಚಿಸಿರುತ್ತಾರೆ.

ಸ್ಪ್ರಿಂಕ್ಲರ್ ನೀರಾವರಿ ಯೋಜನೆಗೆ ಕೇಂದ್ರದ ಧನಸಹಾಯ

ಟಿಜೆಕೆ. ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ನೀರಿನ ಮಿತವ್ಯಯ ಬಳಕೆ ಅಥವಾ ಇದ್ದ ನೀರಿನಿಂದ ಹೆಚ್ಚಿನ ಕ್ಷೇತ್ರಕ್ಕೆ ನೀರು ಉಪಯೋಗಿಸಲಿಕ್ಕೆ ಅನುಕೂಲವಾಗುವ ಡ್ರಿಪ್ ಹಾಗೂ ಸ್ಪ್ರಿಂಕ್ಲರ್ ನೀರಾವರಿ ಮಾಡುವ ರೈತರಿಗೆ ಸಹಾಯ ಧನ ಒದಗಿಸುತ್ತಿರುವುದ ನಿಜವೇ ?

ಆ) ಡ್ರಿಪ್ ಹಾಗೂ ಸ್ಪ್ರಿಂಕ್ಲರ್ ನೀರಾವರಿ ಮಾಡಿದಲ್ಲಿ ಕೇಂದ್ರ ಸರ್ಕಾರದ ಸಹಾಯ ಧನ ನೀಡುವುದೇ ? ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ನೀಡಲಾಗಿದೆ.

ಇ) ಕಳೆದ ೩ ವರ್ಷಗಳಲ್ಲಿ ಸದರಿ ನೀರಾವರಿಗೆ ರಾಜ್ಯ ರೈತರಿಗೆ ಕೊಟ್ಟ ಸಹಾಯಧನ ಎಷ್ಟು ಹಾಗೂ ಅದರಲ್ಲಿ ಕೇಂದ್ರದ ಸಹಾಯ ಧನವೆಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು.